ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ವಯೋಮಿತಿಯನ್ನು 15 ವರ್ಷಕ್ಕೆ ಈಗಾಗಲೇ ಇಳಿಸಲಾಗಿದೆ. ಆದರೆ, ಪಿ.ಯು.ಸಿ. ಪರೀಕ್ಷೆ ತೆಗೆದುಕೊಳ್ಳಲು 18 ವರ್ಷ ಮಾಡಿರತಕ್ಕಂಥದ್ದು ಸರ್ಕಾರದ ಮತ್ತೊಂದು ಧೋರಣೆಯಾಗಿದೆ. ಇವತ್ತಿನ ದಿವಸ ಎಸ್.ಎಸ್.ಎಲ್.ಸಿ. ಗೆ 15 ವರ್ಷ ಮತ್ತು ಪಿ.ಯು.ಸಿ.ಗೆ 18 ವರ್ಷ ಮಾಡಿರುವುದರಿಂದ, ಒಂದು ವರ್ಷದವರೆಗೆ ವಿದ್ಯಾರ್ಥಿಗಳು ಮನೆಯಲ್ಲಿಯೇ ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ, ಪಿ.ಯು.ಸಿ. ಪರೀಕ್ಷೆ ತೆಗೆದುಕೊಳ್ಳಲು ನಿಗದಿ ಮಾಡಿರತಕ್ಕಂಥ 18 ವರ್ಷದ ಅವಧಿಯನ್ನು ಒಂದು ವರ್ಷ ಕಡಿಮೆ ಮಾಡತಕ್ಕಂಥ ಕೆಲಸವನ್ನು ಸರ್ಕಾರ ಮಾಡುವುದಕ್ಕೆ ತಯಾರಿದೆಯೇ ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹಲವಾರು ಜನ ವಿದ್ಯಾರ್ಥಿಗಳು ಅದರಲ್ಲಿಯೂ ಕೂಡ ವಿಶೇಷವಾಗಿ ಗ್ರಾಮೀಣ ಪ್ರದೇಶದ ಮಕ್ಕಳು ಕೇವಲ 5 ಮಾರ್ಕ್ಸ್ ಅಥವಾ ಒಂದು ವಿಷಯದಲ್ಲಿ ಫೇಲ್ ಆಗುತ್ತಿದ್ದಾರೆ. ಇದರಿಂದ ಇಡೀ ವರ್ಷ ಬವಣೆ ಪಡತಕ್ಕಂಥ ಪರಿಸ್ಥಿತಿ ಇತ್ತು. 1988ನೇ ಇಸವಿಯಲ್ಲಿ ಇದ್ದಂಥ ಸರ್ಕಾರದಲ್ಲಿ ಶಿಕ್ಷಣ ಸಚಿವರಾಗಿದ್ದಂಥ ಸನ್ಮಾನ್ಯ ಸೋಮಶೇಖರ್‌ರವರು ಈ ಯೋಜನೆಯನ್ನು ಪ್ರಾರಂಭ ಮಾಡಿದ್ದರು. ಮಾನ್ಯ ಸೋಮಶೇಖರ್‌ರವರು ಈಗಾಗಲೇ ಹೇಳಿದ ಹಾಗೆ ಇವರು ತಂದಂಥ ಯೋಜನೆಯನ್ನು ಇವರ ಸರ್ಕಾರ ಇದ್ದಂಥ ಸಂದರ್ಭದಲ್ಲಿಯೇ ಕಿತ್ತು ಹಾಕಲಾಯಿತು. ಆದರೆ, ನಮ್ಮ ಸರ್ಕಾರ ಬಂದ ಮೇಲೆ ಹಿಂದಿನ ಸರ್ಕಾರ ಏನೇನು ಒಳ್ಳೆಯ ಕೆಲಸಗಳನ್ನು ಮಾಡಿತ್ತೋ, ಅದನ್ನು ಮುಂದುವರಿಸಿಕೊಂಡು ಹೋಗತಕ್ಕಂಥ ಒಂದು ಪದ್ಧತಿಯನ್ನು ನಮ್ಮ ಶಿಕ್ಷಣ ಇಲಾಖೆಯಲ್ಲಿ ಮಾಡಲಾಗಿದೆ. ಆದ್ದರಿಂದ, ಈ ಪದ್ಧತಿಯನ್ನು ಕಳೆದ ವರ್ಷ ಆರಂಭ ಮಾಡಿ ಸುಮಾರು 62 ಸಾವಿರ ಜನ ವಿದ್ಯಾರ್ಥಿಗಳು ಮತ್ತೆ ಉತ್ತೀರ್ಣರಾಗಿ ಪಿ.ಯು.ಸಿ. ವಿದ್ಯಾಭ್ಯಾಸಕ್ಕೆ ಸೇರುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದನ್ನು ಹೊಸದಾಗಿ ಮತ್ತು ಹೆಚ್ಚು ಆಕರ್ಷಕವಾಗಿ, ಸಮರ್ಥವಾಗಿ ಮಾಡತಕ್ಕಂಥ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ಇದರ ಜೊತೆಗೆ ಪಿ.ಯು.ಸಿ. ಯಲ್ಲಿಯೂ ಕೂಡ ಇದೇ ರೀತಿಯ ಪರೀಕ್ಷೆಯನ್ನು ನಡೆಸಬೇಕೆಂದು ಸನ್ಮಾನ್ಯ ಯಾವಗಲ್‌ರವರು ಸಲಹೆಯನ್ನು ಕೊಟ್ಟಿದ್ದಾರೆ. ಹಾಗೆಯೇ ಪಿ.ಯು.ಸಿ. ಪರೀಕ್ಷೆ ತೆಗೆದುಕೊಳ್ಳಲಿಕ್ಕೆ ಈಗ ಇರತಕ್ಕಂಥ 18 ವರ್ಷ ವಯಸ್ಸಿನ ಮಿತಿಯನ್ನು ಕಡಿಮೆಗೊಳಿಸಬೇಕೆಂದು ಸನ್ಮಾನ್ಯ ಸದಾನಂದಗೌಡರು ಸಲಹೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ನೀಡಿರತಕ್ಕಂಥ ಸಲಹೆಗಳನ್ನು ಅಳವಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗ ತಡೆಗಟ್ಟುವಿಕೆ

26(30) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ಪಟ್ಟಣದಲ್ಲಿ ಮಲೇರಿಯಾ ರೋಗವಿದ್ದಾಗ್ಯೂ ಕಡೂರು ಪಟ್ಟಣ ಪುರಸಭೆಯಲ್ಲಿ ಮಲೇರಿಯಾ ರೋಗ ಹರಡುವ ಸೊಳ್ಳೆಗಳನ್ನು ನಿರ್ನಾಮ ಮಾಡಲು ಸಿಂಪಡಿಸಬೇಕಾದ ಔಷಧಿಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲವೇ;

ಆ) ಹಾಗಿದ್ದಲ್ಲಿ ಇಂತಹ ಸಿಂಪಡಿಸುವ ಔಷಧಿಗಳನ್ನು ಪುರಸಭೆಗಳಿಗೆ ಪೂರೈಸುವ ಜವಾಬ್ದಾರಿ ಯಾರದು ಹಾಗೂ ಪೂರೈಸದಿರಲು ಕಾರಣಗಳೇನು?

ಡಾ। ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಭಾರತ ಸರ್ಕಾರದ ಮಾರ್ಗಸೂಚಿಯಂತೆ ಮಲೇರಿಯಾ ನಿಯಂತ್ರಣಕ್ಕೆ ಸೊಳ್ಳೆಗಳ ಉತ್ಪತ್ತಿ ತಾಣಗಳಲ್ಲಿ ಸಿಂಪಡಿಸಲು ಕೀಟನಾಶಕ (ಲಾರ್ವಾಸಿಡಿಸ್ ಮತ್ತು ಅಡಲ್ಟಿಸಿಡಿಸ್) ದ್ರಾವಣವನ್ನು ನಗರ ಮಲೇರಿಯಾ ಯೋಜನೆ ಜಾರಿಯಲ್ಲಿರುವ ಸ್ಥಳೀಯ ಸಂಸ್ಥೆಗಳಿಗೆ ಒದಗಿಸಲು ಅವಕಾಶವಿರುತ್ತದೆ.

ಕಡೂರು ನಗರ ಸಭೆಯು ನಗರ ಮಲೇರಿಯಾ ಯೋಜನೆ ಅಡಿಗೆ ಒಳಪಡದೆ ಇರುವುದರಿಂದ ಭಾರತ ಸರ್ಕಾರವು ಕೀಟನಾಶಕ (ಲಾರ್ವಾಸಿಡಿಸ್ ಮತ್ತು ಅಡಲ್ಟಿಸಿಡಿಸ್) ದ್ರಾವಣವನ್ನು ಒದಗಿಸಿರುವುದಿಲ್ಲ.

ಆದರೂ ಸಹ 2001ನೇ ಸಾಲಿನಲ್ಲಿ ಜಿಲ್ಲಾ ಮಲೇರಿಯಾ ಅಧಿಕಾರಿಗಳು, ಚಿಕ್ಕಮಗಳೂರು ಇವರ ಮತಿಯಿಂದ ಆಯ್ದ ಪ್ರದೇಶಗಳಲ್ಲಿ ಕೀಟನಾಶಕ ಸಿಂಪಡಣಾ ಕಾರ್ಯವನ್ನು ಇತರ ನಿಯಂತ್ರಣ ಕಾರ್ಯಕ್ರಮಗಳ ಜೊತೆಗೆ ಕೈಗೊಳ್ಳಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಕಳೆದ ನಾಲ್ಕೈದು ತಿಂಗಳಿಂದ ಕಡೂರು ತಾಲ್ಲೂಕಿನಲ್ಲಿ ಮಲೇರಿಯಾ ರೋಗ ಇದೆ. ಹಾಗೆಯೇ ಇವತ್ತಿನ ದಿವಸ ಕಡೂರು ಪಟ್ಟಣದಲ್ಲಿಯೂ ಕೂಡ ಮಲೇರಿಯಾ ರೋಗ ಇದೆ. ಇವತ್ತಿನ ದಿವಸ ಫರಾಮಿನನ್ ಗುಳಿಗೆಗಳನ್ನು ಕೊಡುವುದರಿಂದ ಮಲೇರಿಯಾ ರೋಗವನ್ನು ನಿವಾರಣೆ ಮಾಡುವುದಕ್ಕೆ ಆಗುವುದಿಲ್ಲ. ಮಲೇರಿಯಾ ರೋಗ ಕಡೂರು ಪಟ್ಟಣದಲ್ಲಿಯೂ ಇದೆ ಎನ್ನತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ ಪುರಸಭೆ ವ್ಯಾಪ್ತಿಗೆ ಬರತಕ್ಕಂಥ ಪ್ರದೇಶದಲ್ಲಿ ನಾವು ಔಷಧಿಯನ್ನು ಸಿಂಪಡಣೆ ಮಾಡುವುದಕ್ಕೆ ಆಗುವುದಿಲ್ಲವೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಕಡೂರು ಪಟ್ಟಣ ಪ್ರದೇಶಕ್ಕೆ ಪ್ರತಿದಿವಸ ಬೇರೆ ಬೇರೆ ಊರಿನ ಗ್ರಾಮಸ್ಥರು ಬಂದು ಹೋಗುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಔಷಧಿಯನ್ನು ಸಿಂಪಡಣೆ ಮಾಡಿ ಮಲೇರಿಯಾ ರೋಗವನ್ನು ನಿವಾರಣೆ ಮಾಡುತ್ತೇವೆಂದು ಅಸಮಾಧಾನವಾದ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಕಡೂರು ಪಟ್ಟಣದಲ್ಲಿ ಹೆಚ್ಚು ಸೊಳ್ಳೆಗಳಿರುವುದರಿಂದ ಇಲ್ಲಿ ಔಷಧಿಯನ್ನು ಸಿಂಪಡಿಸಲೇಬೇಕಾಗಿದೆ. ಕಡೂರು ತಾಲ್ಲೂಕಿಗೆ ಕ್ಲೋರಾಮಿನ್ ಗುಳಿಗೆಗಳನ್ನು ಕೊಟ್ಟಿದ್ದೇವೆ ಮತ್ತು ಐದು ಸಾವಿರ ಕೆ.ಜಿ. ಯಷ್ಟು ಔಷಧಿ ಸಿಂಪಡಣೆ ಮಾಡಲಾಗಿದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಇವತ್ತಿನ ದಿವಸ ಮಲೇರಿಯಾ ರೋಗವನ್ನು

ಸಂಪೂರ್ಣವಾಗಿ ನಿರ್ಮೂಲನ ಮಾಡಬೇಕು ಎನ್ನುತಕ್ಕಂಥ ಒತ್ತಾಯವನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಡಾ। ಎ.ಬಿ. ಮಾಲಕ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ಸಂಸ್ಥೆಗೂ ಸಹ ಅವರದೇ ಕರ್ತವ್ಯ ಇರುತ್ತದೆ. ಡಿಪ್ಟ್ರಿಕ್ಟ್ ಮಲೇರಿಯಾ ಆಫೀಸರ್‌ರವರ ಕರ್ತವ್ಯ ಕೇವಲ ಗ್ರಾಮೀಣ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ನಗರಸಭೆಯವರಿಗೆ ಅವರದೇ ಆದಂಥ ಕರ್ತವ್ಯ ಇರುವುದರಿಂದ ಅವರು ತಮ್ಮದೇ ಆದಂಥ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು. ಆದರೆ ಯಾವ ನಗರಸಭೆಯ ಜನಸಂಖ್ಯೆ 60 ಸಾವಿರಕ್ಕಿಂತ ಹೆಚ್ಚು ಇರುತ್ತದೆಯೋ ಅಂಥ ಕಡೆ ಭಾರತ ಸರ್ಕಾರ ಔಷಧಿಯನ್ನು ಒದಗಿಸಿಕೊಡುತ್ತದೆ. ಆದರೆ ಇದಕ್ಕೆ ಸಿಬ್ಬಂದಿಯನ್ನು ನಾವೇ ನೇಮಕಮಾಡಿಕೊಳ್ಳಬೇಕಾಗುತ್ತದೆ. 40 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುತಕ್ಕಂಥ ನಗರಸಭೆಯಲ್ಲಿ, ಆ ನಗರ ಸಭೆಯವರೇ ತಮ್ಮ ತಮ್ಮ ವ್ಯವಸ್ಥೆಗಳನ್ನು ಮಾಡಿಕೊಳ್ಳತಕ್ಕಂಥದ್ದು ನಿಯಮದಲ್ಲಿದೆ. ಇಷ್ಟೆಲ್ಲಾ ನಿಯಮಗಳು ಇದ್ದರೂ ಕೂಡ ಕಡೂರು ನಗರದಲ್ಲಿ ಮಲೇರಿಯಾ ಪ್ರಕರಣಗಳು ಹೆಚ್ಚಾಗಿ ಕಂಡು ಬಂದಿರುವುದರಿಂದ ಈಗಾಗಲೇ ಚಿಕ್ಕಮಗಳೂರು ಜಿಲ್ಲಾ ಆರೋಗ್ಯ ಅಧಿಕಾರಿಯವರು ಅಲ್ಲಿ ಕೀಟನಾಶಕ ಔಷಧಿಗಳನ್ನು ಸಿಂಪಡಿಸತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಈ ಕೆಲಸ ಈಗ ಅಲ್ಲಿ ನಡೆಯುತ್ತಿದೆ. ಕಡೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಮಲೇರಿಯಾ ರೋಗ ಹೆಚ್ಚಾಗಿ ಕಾಣಿಸುತ್ತಿದೆ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಇವತ್ತಿನ ದಿವಸ ನಮ್ಮ ರಾಜ್ಯದ 27 ಜಿಲ್ಲೆಯಲ್ಲಿರತಕ್ಕಂಥ 174 ತಾಲ್ಲೂಕುಗಳಲ್ಲಿ ಈ ಮಲೇರಿಯಾ ಪ್ರಕರಣಗಳು ವರದಿಯಾಗಿದೆ. ಇದರಿಂದ ಹೆಚ್ಚು ಗಾಬರಿ ಪಡತಕ್ಕಂಥ ಅವಶ್ಯಕತೆ ಏನು ಇಲ್ಲ. ಎನ್‌ಒಎಸ್ ಪ್ಯಾರಾಸೆಟಿಕ್ ಇಂಡೆಕ್ಸ್ ಪ್ರಕಾರ ಇದು ಎರಡಕ್ಕಿಂತ ಹೆಚ್ಚು ಆದಂಥ ಸಂದರ್ಭದಲ್ಲಿ ಮಾತ್ರ ಔಷಧಿಯನ್ನು ಸಿಂಪಡಿಸತಕ್ಕಂಥ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಏಕೆಂದರೆ, ಈ ಕೀಟನಾಶಕ ಔಷಧಿಯನ್ನು ಸಿಂಪಡಿಸತಕ್ಕಂಥ ಕಾರ್ಯವನ್ನು ನಾವು ಮೊದಲೇ ತೆಗೆದುಕೊಂಡರೆ ಏನು ತೊಂದರೆಯಾಗುತ್ತದೆಂದರೆ, ಸೊಳ್ಳೆಗಳು ಪ್ರತಿರೋಧಕ ಶಕ್ತಿಯನ್ನು ಉತ್ಪಾದನೆ ಮಾಡಿಕೊಳ್ಳುವುದರಿಂದ ಮುಂದೆ ಬಹಳ ಅನಾಹುತ ಉಂಟಾಗುತ್ತದೆಂದು ವರ್ಲ್ಡ್ ಹೆಲ್ತ್ ಆರ್ಗನೈಜೇಶನ್ ಸೂಚನೆ ಕೊಟ್ಟಿದೆ. ನಾನು ಈಗಾಗಲೇ ಹೇಳಿದಂತೆ, ಎನ್‌ಒಎಸ್ ಪ್ಯಾರಾಸೆಟಿಕ್ ಇಂಡೆಕ್ಸ್ ಪ್ರಕಾರ ಎರಡಕ್ಕಿಂತ ಹೆಚ್ಚು ಆದಂಥ ಸಂದರ್ಭದಲ್ಲಿ ಔಷಧಿಯನ್ನು ಸಿಂಪಡಿಸತಕ್ಕಂಥ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಆದ್ದರಿಂದ ನಾವು ಮುಂಜಾಗ್ರತೆ ಕ್ರಮವಾಗಿ ಸೊಳ್ಳೆ ಪದರಗಳನ್ನು ಮತ್ತು ಸೊಳ್ಳೆಗಳು ಕಚ್ಚದಂತೆ ನಮ್ಮ ದೇಹಕ್ಕೆ ಹಚ್ಚಿಕೊಳ್ಳತಕ್ಕಂಥ ಔಷಧಿಯನ್ನು ಹಾಕಿಕೊಂಡರೆ ಅನುಕೂಲವಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಈಗ ಇರತಕ್ಕಂಥ ಸಂಸ್ಥೆಗಳು ಅವರವರ ಕೆಲಸಗಳನ್ನು ಅವರೇ ಮಾಡಿಕೊಳ್ಳಬೇಕೆಂದು ಮಾನ್ಯ ಸಚಿವರು ಈಗ ಹೇಳಿದ್ದಾರೆ. ಇವತ್ತಿನ ದಿವಸ ಪುರಸಭೆಯ ಆರ್ಥಿಕ ಮಟ್ಟ ಎಷ್ಟರಮಟ್ಟಿಗೆ ಇದೆ ಎಂದರೆ ಪುರಸಭೆಯಲ್ಲಿ ಇರತಕ್ಕಂಥ ಕಾರ್ಯಕ್ರಮಗಳನ್ನು ಅವರಿಂದ ಮಾಡುವುದಕ್ಕೆ ಆಗುತ್ತಿಲ್ಲ. ಇವತ್ತಿನ ದಿವಸ ಮಲೇರಿಯಾ ರೋಗವನ್ನು ನಿವಾರಣೆ ಮಾಡುವುದಕ್ಕೆ ಔಷಧಿಯನ್ನು ಸಿಂಪಡಿಸಬೇಕಾಗುತ್ತದೆ. ಆದರೆ ಈ ಕೆಲಸವನ್ನು ಪುರಸಭೆ ಮಾಡಬೇಕೆಂದು ಹೇಳಿದರೆ, ಇದರಿಂದ ಖಂಡಿತವಾಗಿಯೂ ಕೂಡ

ಮಲೇರಿಯಾ ರೋಗವನ್ನು ನಿಯಂತ್ರಣೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಸರ್ಕಾರ ಭರಿಸಶಕ್ಯಂಥದ್ದಕ್ಕೆ ಸಾಧ್ಯವಿದೆಯೇ ಎನ್ನತಕ್ಕಂಥದ್ದನ್ನು ಮಾನ್ಯ ಆರೋಗ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಡಾ। ಎ.ಬಿ. ಮಾಲಕ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಇದು ಪಾಲಿಸಿ ಮ್ಯಾಟರ್ ಆಗಿದೆ. ಆದ್ದರಿಂದ ಆರೋಗ್ಯ ಇಲಾಖೆಯು ಕೀಟನಾಶಕ ಔಷಧಿಯನ್ನು ಒದಗಿಸಿಕೊಡುತ್ತದೆ. ಆದರೆ ಸಿಬ್ಬಂದಿಗಳನ್ನು ಅವರೇ ಒದಗಿಸಿಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಕೀಟನಾಶಕ ಔಷಧಿಯನ್ನು ಒದಗಿಸಿ ಕೊಡುತ್ತೇವೆ, ಆದರೆ ಸಿಬ್ಬಂದಿಯನ್ನು ಒದಗಿಸಿಕೊಡಿ ಎಂದು ಹೇಳಿದರೆ ಇವತ್ತಿನ ದಿನಸ ಪುರಸಭೆಗಳಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಯವರು ಒಂದು ಆದೇಶ ಹೊರಡಿಸಿ ಈ ಕೆಲಸವನ್ನು ಮಾಡಿಸಬೇಕಾಗುತ್ತದೆ. ಇಲ್ಲದಿದ್ದರೆ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲ.

ಶ್ರೀ ಎಸ್.ಹೆಚ್. ಪುಟ್ಟಲಿಂಗನಾಥ್: ಮಾನ್ಯ ಅಧ್ಯಕ್ಷರೆ, ಟ್ಯಾಮ್ ಕೆಲಸ ಮಾಡುವುದಕ್ಕೆ ಹೊರ ರಾಜ್ಯವಾದ ಆಂಧ್ರಪ್ರದೇಶದಿಂದ ಕೆಲಸಗಾರರು ಬರುತ್ತಾರೆ. ಅವರು ಅಲ್ಲಿಂದ ಬರುವಾಗಲೇ ಈ ಕಾಯಿಲೆಯನ್ನು ಹೊತ್ತು ತರತಕ್ಕಂಥ ವ್ಯವಸ್ಥೆ ಇದೆ. ಆದ್ದರಿಂದ ಅವರಿಗೆ ಬಂದಿರತಕ್ಕಂಥ ಮಲೇರಿಯಾ ರೋಗವನ್ನು ತಡೆಗಟ್ಟುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಡಾ। ಎ.ಬಿ. ಮಾಲಕ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಲ್ಲಿ ಮತ್ತು ಯು.ಕೆ.ಪಿ. ಪ್ರಾಜೆಕ್ಟ್‌ನಲ್ಲಿ ಪ್ರತ್ಯೇಕವಾದ ಒಂದು ಮಲೇರಿಯಾ ಯೂನಿಟ್ ಇದೆ. ಇಂಥ ಯೂನಿಟ್‌ಗಳಲ್ಲಿ ಅಲ್ಲಿ ಕೆಲಸ ಮಾಡತಕ್ಕಂಥ ಕೆಲಸಗಾರರಿಗೆ ಔಷಧಿಯನ್ನು ಕೊಡಲಾಗುತ್ತಿದೆ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಇದಕ್ಕೆ ಪೂರಕವಾದಂಥ ಮತ್ತು ಹೆಚ್ಚು ಗಂಭೀರವಾದಂಥ ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಈಗಾಗಲೇ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಔಷಧಿಯನ್ನು ಸಿಂಪಡಿಸಿರುವುದರಿಂದ ಮಗು ಹುಟ್ಟುವುದಕ್ಕಿಂತ ಮುಂಚಿತವಾಗಿಯೇ ತಾಯಿಯ ಗರ್ಭದಲ್ಲಿಯೇ ಮಗುವಿಗೆ ಅಂಗವಿಕಲ ಮತ್ತು ಇತರೇ ಕಾಯಿಲೆ ಬರತಕ್ಕಂಥ ವಿಷಯ ಈಗಾಗಲೇ ಪತ್ರಿಕೆಯಲ್ಲಿ ಬಂದಿದೆ. ಈಗಾಗಲೇ ಕಾಸರಗೋಡು ವಿಭಾಗದಲ್ಲಿ ಸಾವಿರಾರು ಕುಟುಂಬಗಳು ಈ ಒಂದು ಕಾಯಿಲೆಯಿಂದ ನರಳುತ್ತಿವೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಇವತ್ತಿನ ದಿವಸ ಅಲ್ಲಿ ನೂರಾರು ಕುಟುಂಬಗಳು ತೊಂದರೆಗೆ ಒಳಪಟ್ಟಿರತಕ್ಕಂಥ ಸಂಗತಿ ಎಲ್ಲಾ ಪತ್ರಿಕೆಗಳಲ್ಲಿ ಬಂದಿದ್ದರೂ ಸಹ ಅಲ್ಲಿ ಇನ್ನು ಔಷಧಿಯನ್ನು ಸಿಂಪಡಿಸತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವು ಏನೆಂಬುದನ್ನು ಸ್ಪಷ್ಟಪಡಿಸಬೇಕು. ಹಾಗೆಯೇ ಔಷಧಿಯನ್ನು ಸಿಂಪಡಿಸುವ ಕಾರ್ಯಮನ್ನು ತಕ್ಷಣ ನಿಲ್ಲಿಸಬೇಕೆಂದು ತಮ್ಮ ಮುಖಾಂತರ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಡಾ। ಎ.ಬಿ. ಮಾಲಕ ರೆಡ್ಡಿ: ಮಾನ್ಯ ಸದಾನಂದಗೌಡರೆ ತಮ್ಮ ಹತ್ತಿರ ಇರುವ ಆ ಲಿಟರೇಚರ್ ಕಳುಹಿಸಿಕೊಡಿ, ಆದರೆ ಸೈಂಟಿಫಿಕ್ ಡಾಕ್ಯುಮೆಂಟೇಶನ್ ಸರ್ಕಾರದ ಗಮನಕ್ಕೆ ಇದುವರೆಗೆ ಬಂದಿಲ್ಲ. ಆದರೆ ಡಾಕ್ಯುಮೆಂಟೇಶನ್ ಇದ್ದರೆ ಗೊತ್ತಾಗುತ್ತದೆ. ಅದನ್ನು ನಾನು ಎಗ್‌ಜಾಮಿನ್ ಮಾಡಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಈ ಕಾರ್ಯಕ್ರಮಕ್ಕಾಗಿ ಎರಡು ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಇನ್ನು ಮೂರೂವರೆ ಕೋಟಿ ರೂಪಾಯಿಗಳಷ್ಟು ಔಷಧಿ ನಾಳೆ ಖರೀದಿಸಬೇಕೆಂದು ತೀರ್ಮಾನ ಮಾಡುವ ಪ್ರಸ್ತಾವನೆ ಸಚಿವ ಸಂಪುಟದ ಮುಂದೆ ಇದೆ ಎನ್ನುವ ಬಗ್ಗೆ ನಾನು ಆರಿತಿದ್ದೇನೆ. ದಯಮಾಡಿ ತಾವು ಇವತ್ತು ಮಾನ್ಯ ಮುಖ್ಯಮಂತ್ರಿಗಳ ಹಾಗೂ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಇದು ಸೀರಿಯಸ್ ಮ್ಯಾಟರ್ ಆಗಿರುವುದರಿಂದ ಇದು ಜನವಾಹಿನಿ ಪತ್ರಿಕೆಯಲ್ಲಿ ಇವತ್ತು ಬಂದಿದೆ. ದಯಮಾಡಿ ತಾವು ಇದನ್ನು ಎಗ್‌ಜಾಮಿನೇಷನ್‌ಗೆ ಕಳುಹಿಸಿಕೊಡಬೇಕು. ತಾವು ಆ ವಿಷಯವನ್ನು ವಿಥ್‌ಹೆಲ್ಡ್ ಮಾಡಿಸಿ ಇದರ ವರದಿಯನ್ನು ತಜ್ಞರಿಂದ ತರಿಸಿಕೊಳ್ಳುವುದಕ್ಕೆ ಸಾಧ್ಯವೆ ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಏನೋ ಒಂದು ಮಾಡುವುದಕ್ಕೆ ಹೋಗಿ ಇನ್ನೊಂದು ಆಗುವುದು ಬೇಡ ಎಂದು ನಾನು ಇಲ್ಲಿ ನಿವೇದನೆ ಮಾಡುವುದಕ್ಕೆ ನಿಂತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಇವತ್ತಿನ ಜನವಾಹಿನಿ ಪತ್ರಿಕೆಯಲ್ಲಿ ನುಸಿ ರೋಗಕ್ಕೆ ಸಿಂಪಡಿಸುವ ಔಷಧಿ ಬಗ್ಗೆ ಬಂದಿದೆ. ಮಾನ್ಯ ಕೃಷಿ ಸಚಿವರು ಹಾಗೂ ತೋಟಗಾರಿಕೆ ಸಚಿವರು ಇದ್ದರೆ ಒಳ್ಳೆಯದಿತ್ತೆಂದು ಕಾಣುತ್ತದೆ. ಈ ಒಂದು ಔಷಧಿಯನ್ನು ಕೊಂಡುಕೊಂಡು ನುಸಿ ರೋಗಕ್ಕೆ ಸಿಂಪಡಿಸಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡಿವ್ದಾರೆ, ಪತ್ರಿಕೆಯಲ್ಲಿ ಬರೆದಿರುತ್ತಾರೆ. ಕಾಸರಗೋಡಿನಲ್ಲಿ ಹಿಂದೆ ಇಂಡೋಸಲ್ಫಾನ ಔಷಧಿಯನ್ನು ಸಿಂಪಡಿಸಿದ್ದರಿಂದ ಆಗಿರುವ ಅನಾಹುತದ ಬಗ್ಗೆ ಒಂದು ಫೋಟೋ ಕೂಡ ಪತ್ರಿಕೆಯಲ್ಲಿ ಬಂದಿದೆ, ಮಗುವಿನ ತಲೆ ದಪ್ಪಗಾಗಿದೆ. ಇದರಿಂದ ಚರ್ಮರೋಗ, ಕ್ಯಾನ್ಸರ್ ಬರುತ್ತದೆಂದು ಬಂದಿದೆ. ತೀರ್ಮಾನವನ್ನು ತೆಗೆದುಕೊಂಡಿದ್ದರೆ ಅದನ್ನು ಅಲ್ಲಿಗೆ ನಿಲ್ಲಿಸಿ ಇಷ್ಟು ದಿವಸ ತಡವಾಗಿದೆ ಇನ್ನೊಂದಿಷ್ಟು ದಿವಸ ತಡವಾದರೆ ಏನು ತೊಂದರೆಯಾಗುವುದಿಲ್ಲ. ಇದಕ್ಕೆ ಕೆಮಿಕಲ್ ಎಗ್‌ಜಾಮಿನೇಷನ್ ಮಾಡಿಸಿ, ಏಕೆಂದರೆ, ಅಮೇರಿಕಾದಲ್ಲಿ ಎನ್‌ವಿರಾನ್‌ಮೆಂಟಲ್ ಫೆಡರೇಶನ್ ಏಜೆನ್ಸಿಯವರು ಇದನ್ನು ರಿಜಿಸ್ಟ್ರೇಶನ್ ಮಾಡಿಸಿಲ್ಲ. ಬೇರೆ ದೇಶಗಳಲ್ಲಿ ಇದರ ಖರೀದಿಯನ್ನು ಬ್ಯಾನ್ ಮಾಡಿದ್ದಾರೆ. ಅದನ್ನು ಇಲ್ಲಿ ತಂದು ಸಿಂಪಡಣೆ ಮಾಡಿಸಬೇಕು ಎನ್ನುವ ತೀರ್ಮಾನ ತೆಗೆದುಕೊಂಡಿದ್ದಾರೆಂದು ಪತ್ರಿಕೆಯಲ್ಲಿ ಬರೆದಿರುತ್ತಾರೆ. ನಾನು ತಮ್ಮ ಮೂಲಕವಾಗಿ ಸರ್ಕಾರದವರನ್ನು ಕೇಳುವುದೇನೆಂದರೆ, ಈ ಒಂದು ಟ್ರೈಜೊಫಾಸನ್ ಔಷಧಿಯನ್ನು ಖರೀದಿ ಮಾಡಲು ತೀರ್ಮಾನವನ್ನು ಮಾಡಿದ್ದರೆ, ಇದನ್ನು ಮೊದಲು ಲ್ಯಾಬಿಗೆ ಕಳುಹಿಸಿ ಎಗ್‌ಜಾಮಿನ್ ಮಾಡಿಸಬೇಕು. ಇದರಿಂದ ಪುನಃ ಇನ್ನೊಂದು ದುರಂತ ಈ ಭಾಗದಲ್ಲಿ ಆಗಬಾರದೆಂದು ಸರ್ಕಾರಕ್ಕೆ ತಮ್ಮ ಮೂಲಕವಾಗಿ ನಾನು ಕೇಳಿಕೊಂಡು, ಇದರ ಬಗ್ಗೆ ತಕ್ಷಣದಲ್ಲಿ ಕ್ರಮ ಕೈಗೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಡಾ। ಎ.ಬಿ. ಮಾಲಕ ರೆಡ್ಡಿ: ಇದರ ಬಗ್ಗೆ ಸೈಂಟಿಫಿಕ್ ಡಾಕ್ಯುಮೆಂಟೇಶನ್ ನನ್ನ ಹತ್ತಿರ ಇಲ್ಲವೆಂದು ಹೇಳಿದೆ. ಸರ್ಕಾರದ ಹತ್ತಿ ಹಾಗೂ ಇಲಾಖೆಯ ಹತ್ತಿರ ಸೈಂಟಿಫಿಕ್ ಡಾಕ್ಯುಮೆಂಟೇಶನ್ ಇದ್ದರೆ ಅದರಿಂದ ಗೊತ್ತಾಗುತ್ತದ. ನಾನು ಕೂಡ ವೈದ್ಯನಾಗಿರುವುದರಿಂದ, ನನಗೆ ತಿಳಿದ ಮಟ್ಟಿಗೆ ಆ ರೀತಿ ಇಲ್ಲವೆಂದು ನಾನು ಅರ್ಥಮಾಡಿಕೊಂಡಿದ್ದೇನೆ. ಲಿಟರೇಚರ್ ಕೊಟ್ಟಿರುವುದರಿಂದ ಇವರ ಬಗ್ಗೆ ನಾನು ಎಗ್‌ಜಾಮಿನ್ ಮಾಡಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಇದು ಲಕ್ಷಾಂತರ ಜನರ ಬದುಕಿನ ಪ್ರಶ್ನೆಯಾಗಿದೆ. ಈಗ ಮಾನ್ಯ ಕೃಷಿ ಮಂತ್ರಿಗಳು ಇದ್ದರೆ ಚೆನ್ನಾಗಿತ್ತು. ಇಲಾಖೆಯಿಂದ ಏನು ತಕ್ಷಣದಲ್ಲಿ ಖರೀದಿ ಮಾಡಬೇಕೆಂದು ನಿಶ್ಚಯವನ್ನು ಮಾಡಿದ್ದಾರೆ ಎಂಬುದು ತಿಳಿಯಬೇಕಾಗಿದೆ. ತಾತ್ಕಾಲಿಕವಾಗಿ ಇದನ್ನು ನಿಲ್ಲಿಸುವ ಪ್ರಯತ್ನ ಆಗಬೇಕು ಎನ್ನುವ ವಿನಂತಿ ನಮ್ಮದಾಗಿದೆ. ಏಕೆಂದರೆ ಇದರ ಬಗ್ಗೆ ತಮಗೆ ಕೂಡ ಮಾಹಿತಿ ಇಲ್ಲ, ತಕ್ಷಣದಲ್ಲಿ ನಾನು ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದೇನೆ. ಇದರ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳಿಗೆ ಹೆಚ್ಚಿನ ಮಾಹಿತಿ ಇರಬೇಕು. ಮಾನ್ಯ ಕೃಷಿ ಮಂತ್ರಿಗಳು ಬಂದಾಗ, ಅಧ್ಯಕ್ಷರಾದ ತಾವು ನಮಗೆ ಸ್ವಲ್ಪ ಸಮಯದ ಅವಕಾಶವನ್ನು ಕೊಟ್ಟರೆ ಚರ್ಚೆ ಮಾಡಿ ಇದು ಸಿಂಪಡಣೆಯಾಗದ ಹಾಗೆ ಹೇಳಬೇಕು. ಕೇರಳ ರಾಜ್ಯದಲ್ಲಿ ಸುಮಾರು 500-600 ಜನ ಮಕ್ಕಳು ಅಂಗವಿಕಲರಾಗಿದ್ದಾರೆ. ಇದನ್ನು ಕರ್ನಾಟಕದಲ್ಲಿ ಮಾಡಿದರೆ ಆ ಭಾಗದಲ್ಲಿ ಆದಂತೆ ಒಂದು ಗಂಭೀರವಾದ ಪರಿಣಾಮವಾಗುತ್ತದೆ. ಇದರ ಬಗ್ಗೆ ನಮಗೆ ಸಚಿವರು ಬಂದಾಗ ಅವಕಾಶವನ್ನು ಮಾಡಿಕೊಡಬೇಕು.

ಡಾ। ಎ.ಬಿ. ಮಾಲಕ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಾನಂದಗೌಡರು, ಕೇರಳ ರಾಜ್ಯದ ಪ್ರಕರಣವನ್ನು ಉದ್ದೇಶಿಸಿ ಮಾತನಾಡುತ್ತಿದ್ದಾರೆ. ಮಾನ್ಯ ಸಿಂಧ್ಯಾರವರು ಈಗಾಗಲೇ ಎರಡು ಕೋಟಿ ರೂಪಾಯಿಗಳನ್ನು ಇಟ್ಟಿದ್ದು ಇನ್ನೂ ಹೆಚ್ಚಿಗೆ ಖರೀದಿ ಮಾಡುತ್ತಾರೆ ಎನ್ನುವ ಮಾತನ್ನು ಹೇಳಿದರು. ಈ ವಿಷಯದಲ್ಲಿ ನಾನು ಸದನದ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ. 1996ನೇ ಸಾಲಿನಿಂದ ಈ ಮಲೇರಿಯಾ ರೋಗಕ್ಕೆ ಸಿಂಪಡಿಸತಕ್ಕ ಈ ಕೀಟನಾಶಕ ಔಷಧಿ ಬಹಳಷ್ಟು ಪೊಂದರೆಯಾಗಿದೆ. ಈ ಕೀಟನಾಶಕ ಔಷಧಿಯನ್ನು ಸರಬರಾಜು ಮಾಡತಕ್ಕಂಥ ಕರ್ತವ್ಯ ಕೇಂದ್ರ ಸರ್ಕಾರದ್ದಾಗಿದೆ. ಒಡಂಬಡಿಕೆಯ ಪ್ರಕಾರ ಸಿಬ್ಬಂದಿಯನ್ನು ಒದಗಿಸತಕ್ಕಂಥ ಕರ್ತವ್ಯ ರಾಜ್ಯ ಸರ್ಕಾರಕ್ಕೆ ಬರುತ್ತದೆ. 1996ನೇ ಸಾಲಿನಿಂದ ಇಲ್ಲಿಯವರೆಗೆ ಇದರ ಬಗ್ಗೆ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿದೆ. ಅವರು ಡಿಡಿಟಿಯನ್ನು ಒದಗಿಸಿಕೊಡುತ್ತಾರೆ. ಆದರ ಹಿಂದೆಯೇ ಕೇಂದ್ರ ಸರ್ಕಾರದ ಒಂದು ಸರ್ಕ್ಯೂಲರ್ ಬರುತ್ತದೆ. ಡಿಡಿಟಿಯನ್ನು ಉಪಯೋಗ ಮಾಡಬಾರದು ಎಂದು ಇದನ್ನು ಏಕೆ ಒದಗಿಸಿ ಕೊಡುತ್ತಾರೋ ಆ ದೇವರಿಗೇ ಗೊತ್ತು. ಏಕೆಂದರೆ ಬಹಳಷ್ಟು ದೇಶಗಳಲ್ಲಿ ಹಾಗೂ ಪ್ರದೇಶಗಳಲ್ಲಿ ಇದಕ್ಕೆ ಸೊಳ್ಳೆ ಬರುತ್ತದೆ. ಆದಕ್ಕಾಗಿ ಇದನ್ನು ಸಿಂಪಡಿಸಬಾರದು. ಇದನ್ನು ಸಿಂಪಡಿಸಬಾರದೆಂದು ಭಾರತ ಸರ್ಕಾರದ ಸರ್ಕ್ಯೂಲರ್ ಬಂದಮೇಲೆ, ಒಡಂಬಡಿಕೆಯ ಪ್ರಕಾರ ಔಷಧಿಯನ್ನು ಪರ್ಚೇಸ್ ಮಾಡಿ ಕೊಡಬೇಕು. ಅನೇಕ ರೀತಿಯ ಕೆಮಿಕಲ್‌ಗಳು ಇವೆ. ಅದನ್ನು ಒದಗಿಸಿ ಕೊಡುವುದಕ್ಕಾಗುವುದಿಲ್ಲ ಮತ್ತು ಡಿಡಿಟಿ ಯನ್ನು ಉಪಯೋಗ ಮಾಡಬಾರದು. ದುರ್ದೈವ ವಶಾತ್ 1996ನೇ ಸಾಲಿನಿಂದ ಇಡೀ ರಾಜ್ಯದಲ್ಲಿ ಮಲೇರಿಯಾ ರೋಗ ಹೆಚ್ಚಾಗುತ್ತಿದೆ. ದಕ್ಷಿಣ ಭಾರತಕ್ಕಿಂತ ಉತ್ತರ ಭಾರತದಲ್ಲಿ

ವಿಪರೀತವಾಗಿ ಹೆಚ್ಚಾಗುತ್ತಿವೆ. ಮಾನ್ಯ ಸಿಂಧ್ಯಾರವರು ಕೂಡ ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದಾರೆ. ಇದರ ಬಗ್ಗೆ ನಾನು ಆರ್ಥಿಕ ಇಲಾಖೆಯ ಕಾರ್ಯದರ್ಶಿಯವರೊಂದಿಗೆ ಮಾತನಾಡಿದ್ದೇನೆ. ಈ ಕಾರ್ಯಕ್ರಮಕ್ಕಾಗಿ ಮದ್ರಾಸಿನಲ್ಲಿ 19 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ನಾವು ಒಂದು ಪೈಸೆ ಕೂಡ ಇಟ್ಟಿರುವುದಿಲ್ಲ. ಕೇಳಿದಾಗ ಅಡ್‌ಹಾಕ್ ಮೇಲೆ ಹಣವನ್ನು ಕೊಟ್ಟಿದ್ದಾರೆ ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಬಜೆಟ್‌ನಲ್ಲಿ ಮಾತ್ರ ಹಣವನ್ನು ಇಟ್ಟಿರುವುದಿಲ್ಲ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಉದ್ಯೋಗ ಭರವಸೆ ಯೋಜನೆಯಲ್ಲಿ ಒದಗಿಸಿದ ಹಣ

27(290) **ಶ್ರೀ ಗೋಪಾಲ ಬಂಡಾರಿ ಹೆಚ್ (ಕಾರ್ಕಳ):** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಕಳೆದ 3 ವರ್ಷಗಳಿಂದ ಉದ್ಯೋಗ ಭರವಸೆ ಯೋಜನೆಯಲ್ಲಿ ಒದಗಿಸಿದ ಹಣ ಮತ್ತು ಬಿಡುಗಡೆಯಾದ ಹಣ ಎಷ್ಟು (ವಿವರ ಒದಗಿಸುವುದು);

ಆ) ಇತ್ತೀಚಿನ ವರುಷಗಳಲ್ಲಿ ಒದಗಿಸಿದ ಮತ್ತು ಬಿಡುಗಡೆಯಾದ ಹಣ ಕಡಿಮೆಯಾಗಿದ್ದರೆ ಕಾರಣವೇನು?

ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಉದ್ಯೋಗ ಭರವಸೆ ಯೋಜನೆಯಲ್ಲಿ ಒದಗಿಸಿದ ಹಣ ಮತ್ತು ಬಿಡುಗಡೆಯಾದ ಹಣ ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

ಜಿಲ್ಲೆ	1997-98		1998-99		1999-2000	
	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ	ಹಂಚಿಕೆ	ಬಿಡುಗಡೆ
1. ದ. ಕನ್ನಡ	-	775.00	-	475.00	206.96	205.14
2. ಉಡುಪಿ	-	-	-	300.00	171.40	151.05

ಆ) ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ವರ್ಷಾವಾರು ಅನುದಾನವನ್ನು ಕೇಂದ್ರ ಸರ್ಕಾರ ನಿಗದಿಪಡಿಸಿ ಬಿಡುಗಡೆ ಮಾಡುತ್ತದೆ.

ಶ್ರೀ ಹೆಚ್. ಗೋಪಾಲ ಬಂಡಾರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆಯಲ್ಲಿ ಉದ್ಯೋಗ ಭರವಸೆ ಯೋಜನೆಯಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಒದಗಿಸಿದ ಹಣ, ಬಿಡುಗಡೆಯಾದ ಹಣದ ಬಗ್ಗೆ ಮಾಹಿತಿಯನ್ನು ನಾನು ಕೇಳಿರುತ್ತೇನೆ. ಅವರು ಇಲ್ಲಿ ಕೊಟ್ಟಿರುವ ಉತ್ತರದ ಪ್ರಕಾರ 1998-99ನೇ ಸಾಲಿನಲ್ಲಿ